# ಪರ್ಯಾಯ ಶೈಕ್ಷಣಿಕ ಯೋಜನೆ 2021–2022

**10ನೇ ತರಗತಿ** **ಆಗಸ್ಟ್ 2021** **ಪ್ರಥಮ ಭಾಷೆ ಕನ್ನಡ**

| ಕ್ರ ಸಂ | ತಿಂಗಳು/ವಾರ | ಕಲಿಕಾ ಫಲಗಳು/ ಸಾಮರ್ಥ್ಯಗಳು | ಸಲಹಾತ್ಮಕ ಚಟುವಟಿಕೆ | ಮೌಲ್ಯಮಾಪನ ಚಟುವಟಿಕೆಗಳು |
|---|---|---|---|---|
| 01 | ಆಗಸ್ಟ್ ಮೊದಲನೇ ವಾರ | **ಗದ್ಯ ಪಾಠ 01: ಯುದ್ಧ**<br>➢ ಸಣ್ಣಕಥೆಗಳ ಸಾಹಿತ್ಯದ ಪರಿಚಯ ಮಾಡಿಕೊಳ್ಳುವರು<br>➢ ಮಕ್ಕಳು ಪಾಠವನ್ನು ಓದುವರು ಮತ್ತು ಅರ್ಥೈಸಿಕೊಳ್ಳುವರು<br>➢ ಲೇಖಕರ ಪರಿಚಯ ಮಾಡಿಕೊಳ್ಳುವರು (ಸಾ ರಾ ಅಬೂಬ್‌ಕರ್) | ➢ ಶಿಕ್ಷಕರು, ಮಕ್ಕಳಿಗೆ ಕೆಲವು ಸಣ್ಣ ಕಥೆಗಳನ್ನು ಸ್ವಾರಸ್ಯಕರವಾಗಿ ಹೇಳುವರು / ಆಡಿಯೋ ಮೂಲಕ ಕೇಳಿಸುವರು<br>➢ ಮಕ್ಕಳು ಸ್ವತಃ ನಾನೇ ಸಾರಾ ಅಬೂಬ್ಕರ್ ಎಂದು ಕಲ್ಪಿಸಿಕೊಂಡು ಅವರ ಪರಿಚಯ ಮಾಡಿಸುವುದು. | ➢ ಮಕ್ಕಳು ತಮಗೆ ಗೊತ್ತಿರುವ ಕಥೆಗಳನ್ನು ಹೇಳುವುದು.<br>➢ ಮಕ್ಕಳಿಂದ ಕೃತಿಕಾರರ ಪರಿಚಯವನ್ನು ಬರೆಸುವುದು. |
| | | ➢ ವೈದ್ಯ ಸೈನಿಕ – ರಾಹಿಲನ ಪರಿಚಯ ಮಾಡಿಕೊಳ್ಳುವರು ಬ್ಲಾಕ್‌ಔಟ್ ನಿಯಮವನ್ನು ಪರಿಚಯ ಮಾಡಿಕೊಳ್ಳುವರು<br>➢ ರಾಹಿಲನ, ಮುದುಕಿ ಮತ್ತು ಅವಳ ಸೊಸೆಯ ಸಂಕಟ ಹಾಗು ದಯನೀಯ ಸ್ಥಿತಿಯ ಬಗ್ಗೆ ಅರಿಯುವರು. | ➢ ಮಕ್ಕಳಿಂದ ಒಂದು ಚಟುವಟಿಕೆ:– ವಿದ್ಯಾರ್ಥಿಗಳಿಂದ ಡಾಕ್ಟರ್, ಮುದುಕಿ, ಹೆರಿಗೆ ನೋವಿನಿಂದ ಬಳಲುವ ಮಹಿಳೆಯ ಪಾತ್ರಗಳನ್ನು ಏಕಪಾತ್ರಾಭಿನಯ ಮಾಡಿಸುವುದು./ಮುದುಕಿ ಮತ್ತು ರಾಹಿಲನ ನಡುವೆ ನಡೆದಸಂಭಾಷಣೆಯನ್ನು ಬರೆಸುವುದು. | ➢ ರಾಹಿಲನು ಮಾನವೀಯತೆಯನ್ನು ಮೆರೆದ ಬಗ್ಗೆ ಐದು ವಾಕ್ಯಗಳಲ್ಲಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ |
| | ಎರಡನೇ ವಾರ | ❖ ರಾಹಿಲನು ಮುದುಕಿಯ ಕುಟುಂಬಕ್ಕೆ ಮಾಡಿದ ಸಹಾಯ ಮತ್ತು ಮುದುಕಿಯು ರಾಹಿಲನಿಗೆ ಮಾಡಿದ ಸಹಾಯದ ಬಗ್ಗೆ | ❖ ಚಟುವಟಿಕೆ:– ಸಹಾಯ, ಪರೋಪಕಾರದ ಕುರಿತಂತೆ ಮಾತನಾಡಲು ವಿದ್ಯಾಥಿಗಳಿಗೆ ಅವಕಾಶ ನೀಡುವುದು. | ಯುದ್ಧ ಬೇಕೇ? ಬೇಡವೇ? ಎಂಬ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಐದು ಆರು ಸಾಲುಗಳಲ್ಲಿ ಬರೆಯಿರಿ. |

| | | | | |
|---|---|---|---|---|
| | | ತಿಳಿಯುವರು<br>❖ ಯುದ್ಧದ ಕುರಿತಾದ ಮುದುಕಿಯ ಅಭಿಪ್ರಾಯ ತಿಳಿಯುವರು<br>❖ ವರ್ಣಮಾಲೆ ಗುಣಿತಾಕ್ಷರಗಳ ಮತ್ತು ಸಂಯುಕ್ತಾಕ್ಷರಗಳನ್ನು ಮನನ ಮಾಡಿಕೊಳ್ಳುವರು | ❖ ಅನುನಾಸಿಕ ಮತ್ತು ಅವರ್ಗೀಯ ವ್ಯಂಜನಗಳನ್ನು ಒಳಗೊಂಡ ಪದಗಳು ಹಾಗು ಸಂಯುಕ್ತಾಕ್ಷರ ಪದಗಳನ್ನು ಅಭ್ಯಾಸ ಮಾಡಿಸುವುದು. | ಅಭ್ಯಾಸದ ಹಾಳೆ –01<br>ಅಭ್ಯಾಸದ ಹಾಳೆ –02 |
| | 3ನೇ ವಾರ | ಪದ್ಯಪಾಠ–01, ಸಂಕಲ್ಪಗೀತೆ<br>➢ ಭಾವಗೀತೆ ಸಾಹಿತ್ಯದ ಪರಿಚಯ ಮಾಡಿಕೊಳ್ಳುವರು.<br>➢ ಕೃತಿಕಾರರ ಪರಿಚಯ ಮಾಡಿಕೊಳ್ಳುವರು.<br>➢ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕೆಂಬ ಕವಿಯ ಆಶಯದ ಬಗೆಗೆ ಚರ್ಚಿಸುವರು. | ➢ ಕನ್ನಡದ ಪ್ರಚಲಿತವಿರುವ ಭಾವಗೀತೆಯನ್ನು ಕೇಳಿಸುವುದು/ಹಾಡಿಸುವುದು<br>➢ ಕನ್ನಡದ ಪ್ರಸಿದ್ಧ ಸಾಹಿತಿಗಳ ಹೆಸರನ್ನು ಪಟ್ಟಿ ಮಾಡಿಸುವುದು<br>➢ ಜಿ ಎಸ್ ಎಸ್ ಅವರ ಜೀವನದ ಕುರಿತಾದ ಆಡಿಯೋ / ವೀಡಿಯೋ ವೀಕ್ಷಣೆ/ ಸಾಕ್ಷ್ಯ ಚಿತ್ರದ ವೀಕ್ಷಣೆ ಮಾಡಿಸುವುದು/ ಕವಿಯ ಸಂದರ್ಶನದ ಚಟುವಟಿಕೆ ಮಾಡಿಸುವುದು. | ➢ ಕವಿ ಜಿ.ಎಸ್.ಶಿವರುದ್ರಪ್ಪನವರ ಪರಿಚಯವನ್ನು ಬರೆಯಿರಿ.<br>ಅಭ್ಯಾಸದ ಹಾಳೆ 03 |
| | 4ನೇ ವಾರ | ➢ ಬದುಕಿನಲ್ಲಿ ಹೊಸ ಭರವಸೆಯನ್ನು ಮೂಡಿಸಬಹುದೆಂಬ ಆಶಯವನ್ನು ಹೊಂದುವರು<br>➢ ಕ್ರಿಯಾಪದ – ವಿಭಕ್ತಿ ಪ್ರತ್ಯಯಗಳ ಬಗ್ಗೆ ಮನನ ಮಾಡಿಕೊಳ್ಳುವರು | ➢ ಗೂಗಲ್ ಮೀಟ್ ಮೂಲಕ ಧರ್ಮ ಜಾತಿಯತೆಯಿಂದ ಸಮಾಜದಲ್ಲಿ ಉಂಟಾಗುತ್ತಿರುವ ಶೋಷಣೆಯ ಕುರಿತು ಚರ್ಚೆ/ಸಂವಾದವನ್ನು ಏರ್ಪಡಿಸುವುದು.<br>➢ ವಿದ್ಯಾರ್ಥಿ ತನ್ನ ಜೀವನದಲ್ಲಿ ತಾನು ಕೈಗೊಳ್ಳುವ ಸಂಕಲ್ಪವನ್ನು ಪಟ್ಟಿ ಮಾಡುವುದು ಮತ್ತು ಪ್ರಸ್ತುತಪಡಿಸುವುದು.<br>➢ ಧಾತುಗಳಿಗೆ ಅರ್ಥರೂಪ–ಕ್ರಿಯಾರೂಪಗಳನ್ನು ಸೇರಿಸುವುದು.<br>➢ ನಾಮಪ್ರಕೃತಿಗಳಿಗೆ ಪ್ರತ್ಯಯಗಳನ್ನು ಸೇರಿಸಿ ವಾಕ್ಯ ರಚಿಸುವುದು. | ➢ ನೀವು ಜೀವನದಲ್ಲಿ ಕೈಗೊಂಡಿರುವ ಸಂಕಲ್ಪದ ಬಗ್ಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.<br>➢ “ನಿಮ್ಮ ಭವಿಷ್ಯದ ಕನಸು”– ಈ ವಿಷಯದ ಬಗ್ಗೆ ಎಂಟು ಹತ್ತು ಸಾಲುಗಳಲ್ಲಿ ಬರೆಯಿರಿ.<br>➢ ಅಭ್ಯಾಸದ ಹಾಳೆ–4 |

# ಗದ್ಯಭಾಗ~01 ಯುದ್ಧ ಅಭ್ಯಾಸ ಹಾಳೆ–01

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1) ಸೈನ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೈದ್ಯನ ಹೆಸರೇನು ?

______________________________

2) ಬ್ಲಾಕ್‌ಔಟ್ ನಿಯಮವನ್ನು ಎಲ್ಲಿ ಪಾಲಿಸಲಾಗುತ್ತದೆ ?

______________________________

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

3) ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?

______________________________

______________________________

______________________________

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿರಿ.**

4) "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿನೀರು ಸಿದ್ಧಪಡಿಸಿ"

______________________________

______________________________

______________________________

**ಈ) ಈ ಕೆಳಗಿನ ಕವಿ/ಲೇಖಕರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ.**

5) ಸಾ.ರಾ.ಅಬೂಬಕ್ಕರ್

______________________________

______________________________

______________________________

______________________________

# <u>ಅಭ್ಯಾಸ ಹಾಳೆ–02</u> (ವ್ಯಾಕರಣ)

**1) ಕೊಟ್ಟಿರುವ ಪದಗಳಲ್ಲಿರುವ ಅವರ್ಗೀಯ ವ್ಯಂಜನಗಳನ್ನು ಗುರುತಿಸಿ ಬರೆಯಿರಿ.**

| ಹಂಬಲ | ಸೂಲಗಿತ್ತಿ | ನಿರ್ದಯ | ನಿರಾಶೆ | ಯುದ್ಧ |
|---|---|---|---|---|
| | | | | |

**2) ಮಹಾಪ್ರಾಣಾಕ್ಷರಗಳಿಂದ ಕೂಡಿರುವ ಪದಗಳನ್ನು ರಚಿಸಿ.** ಮಾದರಿ :– ಧನ, ಫಲ, ಭೂಮಿ

| | | | | |
|---|---|---|---|---|
| | | | | |
| | | | | |

**3) ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.** ಮಾದರಿ :~ ವಸ್ತ್ರ = ವ್+ಅ+ಸ್+ತ್+ರ್+ಅ

| | |
|---|---|
| * ಸಾರಥಿ | |
| * ದಾಟು | |
| * ಕೃತಕ | |
| * ರೋದನ | |
| * ದೀಪಾವಳಿ | |

**4) ಸಜಾತಿ ಮತ್ತು ವಿಜಾತಿ ಸಂಯುಕ್ತಾಕ್ಷರಗಳನ್ನು ಪಟ್ಟಿ ಮಾಡಿರಿ.**

| | | | | |
|---|---|---|---|---|
| | | | | |
| | | | | |

**5) ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೇ ಪದಕ್ಕಿರುವ ಸಂಬಂಧವನ್ನು ಬರೆಯಿರಿ.**

- ❖ ಗುಡಿ : ಗುಂಡಿ : : ಸಜೆ : __________
- ❖ ಭಾಗ : ಭಾಗ್ಯ : : ಧನ : __________
- ❖ ಭರ : ಭಾರ : : ಜಗ : __________
- ❖ ಯೋಗವಾಹಗಳು : 02 : : ಹ್ರಸ್ವಸ್ವರಗಳು : __________
- ❖ ಸಜ್ಜನ : ಸಜಾತಿಯ ಸಂಯುಕ್ತಾಕ್ಷರ : : ಆರೋಗ್ಯ : __________

## ಪದ್ಯಭಾಗ – 01 ಸಂಕಲ್ಪಗೀತೆ ಅಭ್ಯಾಸ ಹಾಳೆ–03

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1) ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ?

______________________________

2) ಕಾಡುಮೇಡುಗಳ ಸ್ಥಿತಿ ಹೇಗಿದೆ ?

______________________________

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು/ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

3) ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ ?

______________________________

______________________________

______________________________

______________________________

______________________________

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿರಿ.**

4) "ಮುಂಗಾರಿನ ಮಳೆಯಾಗೋಣ"

______________________________

______________________________

______________________________

______________________________

______________________________

______________________________

**ಈ) ಈ ಕೆಳಗಿನ ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ.**

5) ಜಿ.ಎಸ್ ಶಿವರುದ್ರಪ್ಪ :– ______________________________

______________________________

______________________________

______________________________

______________________________

**ಉ) ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ.**

**6) ಕಲುಷಿತವಾದೀ**________________ **ಮತಗಳೆಲ್ಲವೂ**________________

________________ **ಅಥವಾ** ________________

________________ ________________

________________ **ಮುಟ್ಟೋಣ.** ________________ **ಬಿತ್ತೋಣ.**

## ಪದ್ಯಭಾಗ~01 ಸಂಕಲ್ಪಗೀತೆ (ವ್ಯಾಕರಣ) ಅಭ್ಯಾಸ ಹಾಳೆ–04

**1) ನಿಮಗೆ ತಿಳಿದಿರುವ 10 ಕ್ರಿಯಾಪದಗಳನ್ನು ಬರೆಯಿರಿ.**

| | | | | |
|---|---|---|---|---|
| | | | | |
| | | | | |

**2) ಕೊಟ್ಟಿರುವ ಕ್ರಿಯಾಪದಗಳಲ್ಲಿನ ಧಾತುಗಳನ್ನು ಗುರುತಿಸಿ ಬರೆಯಿರಿ.**

| ಕುಣಿಯುವುದು | ಮರೆಯುತ್ತದೆ | ತಿನ್ನುತ್ತಾನೆ | ಹಾಡುವಳು | ಓದುತ್ತದೆ |
|---|---|---|---|---|
| | | | | |

**3) ಮಾದರಿಯಂತೆ ಕ್ರಿಯಾಪದದ ಕಾಲವನ್ನು ಗುರುತಿಸಿ ಉಳಿದೆರಡು ಕಾಲಗಳಿಗೆ ಪರಿವರ್ತಿಸಿ.**

| ಮಾದರಿ: ಬರೆಯುತ್ತಾನೆ | ಬರೆಯುವನು | ಬರೆದನು |
|---|---|---|
| ❖ ಮಲಗಿದನು | | |
| ❖ ಹೀರುವುದು | | |
| ❖ ಗುಡಿಸಿದಳು | | |
| ❖ ಹಾಡುತ್ತದೆ | | |
| ❖ ಕುಡಿದನು | | |

**3)**

| ಅ ಪಟ್ಟಿ | ಬ ಪಟ್ಟಿ | ಉತ್ತರಗಳು |
|---|---|---|
| ➢ ಪಂಚಮಿ | ಅಧಿಕರಣ | |
| ➢ ದ್ವಿತೀಯ | ಕರ್ತೃ | |
| ➢ ಸಪ್ತಮೀ | ಅಪಾದಾನ | |
| ➢ ತೃತೀಯ | ಕರ್ಮ | |
| ➢ ಪ್ರಥಮ | ಕರಣ | |
| | ಸಂಪ್ರದಾನ | |

**ಹೊಂದಿಸಿ ಬರೆಯಿರಿ.**

**4) ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿಗಳನ್ನು ಗುರುತಿಸಿ ಬರೆಯಿರಿ.**

**ಮಾದರಿ:–** ಚಂದ್ರನದಲ್ಲಿ––ಸಪ್ತಮಿ

| ಮನಸ್ಸನ್ನು | ಸಮುದ್ರದೊಳ್ | ಮರದತ್ತಣಿಂ | ಗೀತೆಯ | ಸಂಕಲ್ಪದಿಂದ |
|---|---|---|---|---|
| | | | | |

| | |
|---|---|
| Filename: | 10th kannada  FL  AAC |
| Directory: | C:\Users\Admin\Documents |
| Template: | C:\Users\Admin\AppData\Roaming\Microsoft\Templates\Normal.dotm |
| Title: | |
| Subject: | |
| Author: | NAGARAJ |
| Keywords: | |
| Comments: | |
| Creation Date: | 7/20/2021 12:50:00 PM |
| Change Number: | 27 |
| Last Saved On: | 7/31/2021 12:09:00 PM |
| Last Saved By: | Admin |
| Total Editing Time: | 231 Minutes |
| Last Printed On: | 7/31/2021 12:10:00 PM |
| As of Last Complete Printing | |
| Number of Pages: | 8 |
| Number of Words: | 1,261 (approx.) |
| Number of Characters: | 7,190 (approx.) |